ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

ಸಂಖ್ಯೆ: ಕಸಂವಿ/ಪರೀಕ್ಷಾಂಗ/ಸ್ನಾ ಹಾಗೂ ಸ್ನಾ.ಪ/2016–17 ದಿನಾಂಕ: 21.12.2016

# ಅಧಿಸೂಚನೆ

ವಿಷಯ: ಖಾಸಗಿ ಅಭ್ಯರ್ಥಿಗಳಿಂದ ವಿದ್ವನ್ಮಧ್ಯಮಾ ಬಿ.ಎ./ಶಾಸ್ತ್ರೀ ದ್ವಿತೀಯ ವರ್ಷ, ತೃತೀಯ ವರ್ಷ ಹಾಗೂ ವಿದ್ವದುತ್ತಮಾ ಎಂ.ಎ./ಆಚಾರ್ಯ ದ್ವಿತೀಯ ವರ್ಷ ಪರೀಕ್ಷೆಗಳಿಗೆ ಅರ್ಜಿಗಳನ್ನು ಆಹ್ವಾನಿಸುವ ಬಗೆಗೆ.

2016–17ನೇ ಸಾಲಿನಲ್ಲಿ ವಿದ್ವನ್ಮಧ್ಯಮಾ ಬಿ.ಎ./ಶಾಸ್ತ್ರೀ ದ್ವಿತೀಯ ವರ್ಷ, ತೃತೀಯ ವರ್ಷ ಹಾಗೂ ವಿದ್ವದುತ್ತಮಾ ಎಂ.ಎ./ಆಚಾರ್ಯ ದ್ವಿತೀಯ ವರ್ಷದ ಪರೀಕ್ಷೆಗಳಿಗೆ ಹಾಜರಾಗಲು ಬಯಸುವ ಖಾಸಗಿ ಅಭ್ಯರ್ಥಿಗಳಿಂದ ನೋಂದಣಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿದ್ವನ್ಮಧ್ಯಮಾ ಬಿ.ಎ./ಶಾಸ್ತ್ರೀ ಪ್ರಥಮ ವರ್ಷ ಹಾಗೂ ವಿದ್ವದುತ್ತಮಾ ಎಂ.ಎ./ಆಚಾರ್ಯ ಪ್ರಥಮ ವರ್ಷಕ್ಕೆ ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸುವಂತಿಲ್ಲ. ಖಾಸಗಿ ಅಭ್ಯರ್ಥಿಗಳು ನೇರವಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಆವೇದನಾ ಪತ್ರವನ್ನು ಸಲ್ಲಿಸಬೇಕು.

| ಅಭ್ಯರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ | ಬ್ಯಾಂಕ್ ಹುಂಡಿ ಪಡೆಯುವ ದಿನಾಂಕ | ವಿಳಂಬ ಶುಲ್ಕದೊಂದಿಗೆ ಬ್ಯಾಂಕ್ ಹುಂಡಿ ತೆಗೆಯುವ ದಿನಾಂಕ | ಬ್ಯಾಂಕ್ ಹುಂಡಿಗಳ ಸಹಿತ ಅರ್ಜಿಗಳನ್ನು ವಿಶ್ವವಿದ್ಯಾಲಯಕ್ಕೆ ತಲುಪಿಸುವ ದಿನಾಂಕ |
|---|---|---|---|
| **25.01.2017** | **31.01.2017** | **03.02.2017** | **10.02.2017** |

1. ಸಂಸ್ಕೃತ ವಿದ್ವನ್ಮಧ್ಯಮಾ ಬಿ.ಎ./ಶಾಸ್ತ್ರೀ ದ್ವಿತೀಯ ವರ್ಷ, ತೃತೀಯ ವರ್ಷ ಹಾಗೂ ವಿದ್ವದುತ್ತಮಾ ಎಂ.ಎ./ಆಚಾರ್ಯ ದ್ವಿತೀಯ ವರ್ಷಗಳಿಗೆ ಅರ್ಜಿಗಳನ್ನು ಸಲ್ಲಿಸಲು ಬಯಸುವ ವಿದ್ಯಾರ್ಥಿಗಳು ಅರ್ಜಿಗಳನ್ನು ಈ ಕೆಳಕಂಡ ವೆಬ್‌ಸೈಟ್ ನಲ್ಲಿ ಪಡೆಯತಕ್ಕದ್ದು. www.ksu.ac.in (home page-examination-applications-click here to view application form for examination 2015-16.)
2. ಸ್ವೀಕರಿಸಿದ ಅರ್ಜಿಗಳನ್ನು ಭರ್ತಿಮಾಡಿ ಅವಶ್ಯಕ ದಾಖಲಾತಿಗಳೊಂದಿಗೆ ಪರೀಕ್ಷಾ ಶುಲ್ಕದ ಹುಂಡಿ (ಡಿ.ಡಿ.)ಯನ್ನು **"ಹಣಕಾಸು ಅಧಿಕಾರಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು (Finance Officer, Karnataka Samskrit University, Bangalore)"** ಈ ಹೆಸರಿನಲ್ಲಿ ಪಡೆದು ನಿಗದಿತ ದಿನಾಂಕದಂದು ಅರ್ಜಿಯೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು. ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.
3. ಸಂಸ್ಕೃತ ವಿದ್ವನ್ಮಧ್ಯಮಾ ಬಿ.ಎ./ಶಾಸ್ತ್ರೀ ದ್ವಿತೀಯ ವರ್ಷಕ್ಕೆ ಅರ್ಜಿಗಳನ್ನು ಸಲ್ಲಿಸುವ ವಿದ್ಯಾರ್ಥಿಗಳು ಬಿ.ಎ. ಪ್ರಥಮ ವರ್ಷದ ಅಂಕಪಟ್ಟಿಯೊಂದಿಗೆ ಹಾಗೂ ಸಂಸ್ಕೃತ ವಿದ್ವನ್ಮಧ್ಯಮಾ ಬಿ.ಎ./ಶಾಸ್ತ್ರೀ ತೃತೀಯ ವರ್ಷಕ್ಕೆ ಅರ್ಜಿಗಳನ್ನು ಸಲ್ಲಿಸುವ ವಿದ್ಯಾರ್ಥಿಗಳು ಬಿ.ಎ. ಪ್ರಥಮ ಹಾಗೂ ದ್ವಿತೀಯ ವರ್ಷದ ಅಂಕಪಟ್ಟಿಗಳೊಂದಿಗೆ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಅಂತೆಯೆ ವಿದ್ವದುತ್ತಮಾ ಎಂ.ಎ./ಆಚಾರ್ಯ ದ್ವಿತೀಯ ವರ್ಷಕ್ಕೆ ಅರ್ಜಿಗಳನ್ನು ಸಲ್ಲಿಸುವ ವಿದ್ಯಾರ್ಥಿಗಳು

ಎಂ.ಎ. ಪ್ರಥಮ ವರ್ಷದ ಅಂಕಪಟ್ಟಿಯೊಂದಿಗೆ ಅರ್ಜಿಗಳನ್ನು ಸಲ್ಲಿಸುವುದು. ಇಲ್ಲದಿದ್ದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

4. ಅರ್ಜಿಗಳನ್ನು ಸಲ್ಲಿಸುವ ವಿದ್ಯಾರ್ಥಿಗಳು ಈಗಾಗಲೇ ಪ್ರಥಮ ವರ್ಷದಲ್ಲಿ ನಿಡಲಾಗಿರುವ ನೋಂದಣಿ ಸಂಖ್ಯೆಯನ್ನು ಹಾಗೂ ವಿಷಯಗಳನ್ನು ಕಡ್ಡಾಯವಾಗಿ ಅರ್ಜಿಗಳಲ್ಲಿ ನಮೂದಿಸುವುದು. ಇಲ್ಲದೇ ಹೋದಲ್ಲಿ ಅರ್ಜಿಗಳನ್ನು ತಿಸ್ಕರಿಸಲಾಗುವುದು.
5. ವಿದ್ಯಾರ್ಥಿಗಳು ಪ್ರವೇಶ ಪತ್ರಗಳನ್ನು ಪರೀಕ್ಷೆಗಳು ನಡೆಯುವ ಒಂದು ದಿನದ ಮುಂಚಿತವಾಗಿ ವಿಶ್ವವಿದ್ಯಾಲಯದಿಂದ/ಪರೀಕ್ಷಾ ಕೇಂದ್ರದಿಂದ ತೆಗೆದುಕೊಳ್ಳುವುದು.
6. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ-1ರ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದಲ್ಲಿ ವಿನಾಯಿತಿ ನೀಡಲಾಗಿದೆ. ವಿನಾಯಿತಿ ಪಡೆಯುವ ವಿದ್ಯಾರ್ಥಿಗಳು ತಹಶೀಲ್ದಾರ್‌ರವರಿಂದ ಪಡೆದ ಜಾತಿ ಪ್ರಮಾಣ ಪತ್ರದ ನಕಲು ಪ್ರತಿಯನ್ನು ದೃಢೀಕರಿಸಿ ಕಳುಹಿಸುವುದು. ನಕಲು ಪ್ರಮಾಣಪತ್ರಗಳು ಇಲ್ಲವಾದಲ್ಲಿ ಅಂತಹ ಅರ್ಜಿಗಳನ್ನು ಯಾವುದೇ ಸೂಚನೆ ನೀಡದೆ ತಿರಸ್ಕರಿಸಲಾಗುವುದು.
7. ವಿದ್ವನ್ಮಧ್ಯಮಾ/ ವಿದ್ವದುತ್ತಮಾ ಪರೀಕ್ಷಾ ಶುಲ್ಕದ ವಿವರ.

| ಕ್ರ.ಸಂ. | ಪರೀಕ್ಷೆಗಳ ವಿವರ | ನೋಂದಣಿ ಶುಲ್ಕ | ಪರೀಕ್ಷೆಯ ಶುಲ್ಕ | ಅರ್ಜಿ ಶುಲ್ಕ | ಅಂಕಪಟ್ಟಿ ಶುಲ್ಕ | ಒಟ್ಟು |
|---|---|---|---|---|---|---|
| 1. | ಸಂಸ್ಕೃತ/ವೇದ ವಿದ್ವನ್ಮಧ್ಯಮಾ | 850.00 | 320.00 | 10.00 | 20.00 | 1200.00 |
| 2. | ಸಂಸ್ಕೃತ/ವೇದ ವಿದ್ವದುತ್ತಮಾ | 850.00 | 320.00 | 10.00 | 20.00 | 1200.00 |
| 3. | ಎಸ್.ಸಿ/ಎಸ್.ಟಿ ಹಾಗೂ ಪ್ರವರ್ಗ-1 | 850.00 | - | 10.00 | 20.00 | 880.00 |

8. 2016ನೇ ಸಾಲಿನಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಳ್ಳಲು ಪ್ರತಿ ವಿಷಯಕ್ಕೆ ಶುಲ್ಕ 200/- ಮಾತ್ರ.
9. ಎಲ್ಲರೂ ನೋಂದಣಿ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸಬೇಕು.

s/d
**ಕುಲಸಚಿವರು**
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು